## ಹಳೇ ಫೋಟೊ

ಪದ್ದಿ ದುಗುಡದಿಂದಲೇ ಮನೆಗೆ ಬಂದಳು. ಪದ್ದಿಯ ಗಂಡ ಗುಂಡ, ಏನೋ ಎಡವಟ್ಟಾಗಿದೆ, ಅವಳನ್ನು ಮಾತನಾಡಿಸುವುದೇ ಬೇಡ ಎಂದು ಸುಮ್ಮನಿದ್ದ. ಆದರೂ ಅವಳೇ ಹೇಳಿದಳು, 'ನೋಡಿ, ಲೈಸನ್ಸ್ ಇಲ್ಲದ್ದಕ್ಕೆ ₹500 ದಂಡ ಕಟ್ಟಿದೆ' ಎಂದು. ಗುಂಡನಿಗೆ ಆಶ್ಚರ್ಯವಾಯಿತು. 'ನಿನ್ನ ಹತ್ತಿರ ಲೈಸನ್ಸ್ ಇದೆಯಲ್ಲ, ಮತ್ಯಾಕೆ ದಂಡ ಕಟ್ಟಿದೆ?' ಎಂದು ಕೇಳಿದ. 'ಇದೇರಿ, ಅದರಲ್ಲಿರುವ ನನ್ನ ಫೋಟೊ ತುಂಬಾ ಹಳೆಯದು. ಅಷ್ಟೊಂದು ಚೆನ್ನಾಗಿಲ್ಲ. ಹಾಗಾಗಿ ತೋರಿಸಲಿಲ್ಲ. ಅದಕ್ಕೇ ದಂಡ ಕಟ್ಟಬೇಕಾಯಿತು' ಎಂದಳು. ಗುಂಡ ತೆರೆದ ಬಾಯಿಯನ್ನು ಮುಚ್ಚಲಿಲ್ಲ.

**ಭೋಜರಾಜ ಸೊಪ್ಪಿಮಠ**





## ಹಲ್ಲಿಲ್ಲದ ಅಂಗವಿಕಲೆ

ಸಿಟಿ ಬಸ್ಸಿಗೆ ಹತ್ತಿದ ಬೆಳ್ಳಿ ಕೂದಲಿನ ಆದರೆ ಗಟ್ಟಿಮುಟ್ಟಾದ ಅಜ್ಜಿಯೊಬ್ಬಳು ಜಾಗಕ್ಕಾಗಿ ಸುತ್ತ ನೋಡಿದಳು. ಎಲ್ಲೂ ಸೀಟು ಖಾಲಿ ಇರಲಿಲ್ಲ. ಅಂಗವಿಕಲರ ಸೀಟುಗಳಲ್ಲಿ ಇಬ್ಬರು ಯುವಕರು ಕುಳಿತುಕೊಂಡಿದ್ದರು. ಅಜ್ಜಿಯನ್ನು ನೋಡಿಯೂ ನೋಡದಂತೆ ಕುಳಿತಿದ್ದ ಅವರನ್ನು ನೋಡಿ ಅಜ್ಜಿಗೆ ರೇಗಿ ಹೋಯಿತು. 'ನಾನು ಅಂಗವಿಕಲೆ; ನೋಡಿ, ಬಾಯಿಯಲ್ಲಿ ಒಂದೂ ಹಲ್ಲಿಲ್ಲ, ಸೆಟ್ ತೆಗೆದು ತೋರಿಸ್ಲಾ?' ಎಂದು ಜೋರಾಗಿ ಯುವಕರನ್ನು ಪ್ರಶ್ನಿಸಿದಾಗ ಅವರಲ್ಲಿ ಒಬ್ಬ ನಗುತ್ತ ಸೀಟು ಬಿಟ್ಟು ಕೊಟ್ಟ.

**ಸುಶೀಲಾ ರಾವ್**